O.S.No.:188/2014

DW.:3

**ದಿಃ 05-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ Sri.MMK ವಕೀಲರಿಂದಃ**

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಮೂಡಲಗಿಯ ಬಸವೇಶ್ವರ ನಗರದಲ್ಲಿ ವಾಸವಿರುತ್ತೇನೆ. ಮೂಡಲಗಿಯ ಬಸವೇಶ್ವರ ನಗರದಿಂದ ಲಕ್ಷ್ಮೀ ನಗರ ಅರ್ದ ಕಿ ಮೀ ಅಂತರದಲ್ಲಿದೆ ಎಂದರೆ ಸರಿ ಅಲ್ಲ, 2 ಕಿ ಮೀ ದೂರ ಇರುತ್ತದೆ. ನನಗೆ ಪ್ರಸ್ತುತ ಪ್ರಕರಣದ ಪ್ರತಿವಾದಿ ನಂ.2 ರವರು ಸುಮಾರು 45 ವರ್ಷಗಳಿಂದ ಪರಿಚಯವಿರುತ್ತಾರೆ. ನನ್ನ ಮತ್ತು ಪ್ರತಿವಾದಿ ನಂ.2 ರವರ ನಡುವೆ 45 ವರ್ಷಗಳಿಂದ ಒಳ್ಳೆಯ ಸಂಬಂದ ಇರುತ್ತದೆ ಎಂದರೆ ಸರಿ. ಈ ದಿನ ನಾನು ನ್ಯಾ. ಕ್ಕೆ ಸಾಕ್ಷ್ಯವನ್ನು ನುಡಿಯಲು ಪ್ರತಿವಾದಿ ನಂ.2 ರವರ ಜೊತೆ ಬಂದಿರುತ್ತೇನೆಂದರೆ ಸರಿ. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಪ್ರತಿವಾದಿ ನಂ.2 ರವರ ವಕೀಲರ ಕಚೇರಿಗೆ ಹೋಗಿ ಗಣಕೀಕರಿಸಿರುತ್ತೇನೆಂದರೆ ಸರಿ. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಪ್ರಸ್ತುತ ದಾವೆಯಲ್ಲಿ ಇರುವ ದಾವಾ ಆಸ್ತಿಗಳ ಬಗ್ಗೆ ಮಾಹಿತಿಯನ್ನು ನ್ಯಾಯಾಲಯದಲ್ಲಿರುವ ಕಡತವನ್ನು ನೋಡಿ ನಾನು ತಿಳಿದುಕೊಂಡಿರುವುದಿಲ್ಲ. ಪ್ರಸ್ತುತ ದಾವೆಯಲ್ಲಿ ಇರುವ ದಾವಾ ಆಸ್ತಿಗಳ ಸರ್ವೇ ನಂಬರ ನನಗೆ ತಿಳಿದಿರುವುದಿಲ್ಲ. ಪ್ರತಿವಾದಿ ನಂ.2 ರವರು ತಮ್ಮ ತಂದೆಯ ಕಾಲದಿಂದಲೂ ಬಡಿಗೆತನ ಮತ್ತು ಕಂಬಾರಿಕೆ ವೃತ್ತಿಯನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ ನಂ.2 ರವರು ತಮ್ಮ ತಂದೆಯ ಮರಣಾ ನಂತರ ಅವರ ತಂದೆಯ ವೃತ್ತಿಯನ್ನು ಮುಂದುವರಿಸಿಕೊಂಡು ಬಂದರು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಮಾರು ವರ್ಷಗಳ ಹಿಂದೆ 2 ನೇ ಪ್ರತಿವಾದಿ ಒಟ್ಟು ಕುಟುಂಬದಿಂದ ಹೊರಬಂದು ಜೀವನ ಮಾಡುತ್ತಿದ್ದಾರೆಂದು ಹೇಳಿದ್ದು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನೋಡಿ ನಾನು ತಿಳಿದುಕೊಂಡಿರುವುದಿಲ್ಲ.

2009 ರಲ್ಲಿ ವಾದಿಯ ಪತಿ ಮತ್ತು ವಾದಿಯ ಮಾವ ಭೀಮಪ್ಪ ಇಬ್ಬರೂ ಸೇರಿಕೊಂಡು ತನ್ನ ಪಾಲಿನ ಹೊಲವನ್ನು ಮಾರಾಟ ಮಾಡಲು ತೆಗೆದಿದ್ದು ದಿಃ 30-12-2009 ರಲ್ಲಿ ಸುಕುಮಾರ ಬೋಳಿ ಎಂಬ ವ್ಯಕ್ತಿ ಸುಮಾರು 52,000/- ರೂಪಾಯಿಗಳ ಮುಂಗಡ ಹಣವನ್ನು ನೀಡಿ ಖರೀದಿ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಖರೀದಿ ಕರಾರು ಪತ್ರ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಈ ವಿಚಾರವನ್ನು ನನಗೆ 2 ನೇ ಪ್ರತಿವಾದಿ ನೀಡಿರುತ್ತಾರೆ. ದಿಃ 31-03-2012 ರಂದು ಪ್ರತಿವಾದಿ ನಂ. 2 ರವರು 52,000/- ರೂ. ಗಳನು್ನ ಸುಕುಮಾರ ಬೋಳಿ ಇವರಿಗೆ ಕೊಟ್ಟು ಖರೀದಿ ಕರಾರು ಪತ್ರವನ್ನು ತೆಗೆದುಕೊಂಡು ಅದೇ ದಿನ ವಾದಿ ನಂ.1 ರವರ ಪತಿಗೆ ಮತ್ತೆ ರೂ.85,000/- ಹಣವನ್ನು ಆತನ ಪಾಲಿನ ಬದಲಾಗಿ ನೀಡಿದ್ದು ಇರುತ್ತದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಸದರಿ ವಿಚಾರವಾಗಿ ದಾಖಲಾತಿಯನ್ನು ಮಾಡಿರುತ್ತಾರೆ. ಸದರಿ ದಾಖಲಾತಿಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ಸುಕುಮಾರ ಬೋಳಿ ಸಹಿ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಸದರಿ ದಾಖಲಾತಿಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದು ಬರೆಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಈಗ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಾಂಡ್ ಪೇಪರನ್ನು 2 ನೇ ಪ್ರತಿವಾದಿ

ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 2 ನೇ ಪ್ರತಿವಾದಿ ಸುಕುಮಾರ ಬೋಳಿ ಇವರಿಂದ ಪಡೆದುಕೊಂಡ ಖರೀದಿ ಕರಾರು ಪತ್ರ ಯಾವ ಸರ್ವೆ ನಂಬರಿಗೆ ಸಂಬಂದಿಸಿದ್ದು ಎಂದು ನನಗೆ ತಿಳಿದಿರುವುದಿಲ್ಲ.

ಪ್ರಸ್ತುತ ದಾವೆಯಲ್ಲಿರುವ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ ಎಂದರೆ ಜಮೀನುಗಳು ಮಾತ್ರ ಒಟ್ಟು ಕುಟುಂಬದ ಆಸ್ತಿಯಾಗಿದ್ದು ಮನೆ ಪ್ರತಿವಾದಿ ನಂ.2 ರವರ ಹೆಸರಿನಲ್ಲಿರುತ್ತದೆ. ಪ್ರತಿವಾದಿ ನಂ.2 ರವರ ತಂದೆಯ ಕಾಲದಿಂದಲೂ ಪ್ರತಿವಾದಿ ನಂ.2 ರವರ ತಂದೆ ಮತ್ತು ಎಲ್ಲಾ ಕುಟುಂಬದ ಸದಸ್ಯರು ಲಕ್ಷ್ಮೀ ನಗರದಲ್ಲಿರುವ ಟಿ.ಎಮ್.ಸಿ.ನಂ.1776 ಮನೆಯಲ್ಲಿ ವಾಸವಿರುತ್ತಿದ್ದರು ಎಂದರೆ ಸರಿ. ವಾದಿ ನಂ.1 ರವರ ಪತಿ ಬಸವರಾಜ ಬಡಿಗೇರ ಲಕ್ಷ್ಮೀ ನಗರದಲ್ಲಿರುವ ಟಿ.ಎಮ್.ಸಿ.ನಂ.1776 ಮನೆಯಲ್ಲಿ ಮರಣ ಹೊಂದಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿ ಮನೆ ಟಿ.ಎಮ್.ಸಿ.ನಂ.1776 ನ್ನು 2 ನೇ ಪ್ರತಿವಾದಿ ಎಲ್ಲರೂ ಕೂಡಿ ಇದ್ದಾಗ ಖರೀದಿ ಮಾಡಿರುತ್ತಾನೆ ಎಂದರೆ ಸರಿ ಅಲ್ಲ, ಸಾಕ್ಷಿಯು ಮುಂದುವರಿದು ಪ್ರತಿವಾದಿ ನಂ.2 ರವರು ಸದರಿ ಮನೆಯನ್ನು ಆತನ ತಂದೆ ಆತನನ್ನು ಮನೆಯಿಂದ ಹೊರ ಹಾಕಿದ ನಂತರ ಸ್ವತಃ ಖರೀದಿ ಮಾಡಿರುತ್ತಾನೆ.

ಮಲ್ಲಪ್ಪ ಕಂಬಾರಿಕೆ ಮತ್ತು ಬಡಿಗೆತನ ಬಿಟ್ಟು ಬೇರೆ ಯಾವುದೇ ಉದ್ಯೋಗ ಮಾಡುವುದಿಲ್ಲ ಎಂದರೆ ಸರಿ. ಟಿ.ಎಮ್.ಸಿ.ನಂ.1776 ನ್ನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಒಟ್ಟು ಕುಟುಂಬದ ಸದಸ್ಯರು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಒಳ್ಳೆಯ ಸ್ನೇಹ ಇರುವುದರಿಂದ ಟಿ.ಎಮ್.ಸಿ.ನಂ.1776 ನ್ನು 2 ನೇ ಪ್ರತಿವಾದಿ ಸ್ವತಃ ಖರೀದಿಸಿರುತ್ತಾನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

ವಾದಿ ನಂ.1 ರವರ ಪತಿ ಬಸವರಾಜ ಬಡಿಗೇರ ಈತನು 2012 ರಲ್ಲಿ ದುಶ್ಚಟಕ್ಕೆ ಒಳಗಾಗಿ ಅನಾರೋಗ್ಯ ಸಮಸ್ಯೆಯಿಂದ ಮರಣ ಹೊಂದಿರುತ್ತಾನೆ ಎಂದರೆ ಸರಿ. ಬಸವರಾಜ ಬಡಿಗೇರ ಈತನು ದುಶ್ಚಟಕ್ಕೆ ಒಳಗಾಗಿದ್ದರಿಂದ ವಾದಿ ನಂ.1 ರವರು ದಿಃ 20-07-2006 ರಲ್ಲಿ ನಿಪಿ-7 ರಂತೆ ಪತ್ರಿಕಾ ಪ್ರಕಟಣೆಯನ್ನು ಕೊಟ್ಟಿರುತ್ತಾರೆಂದರೆ ನನಗೆ ಮಾಹಿತಿ ಇರುವುದಿಲ್ಲ. ಈಗಲೂ ಸಹ ಪ್ರತಿವಾದಿ ನಂ.2 ಮತ್ತು ಅವರ ಸಹೋದರರ ನಡುವೆ ಯಾವುದೇ ಪಾಲು ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.2 ಮತ್ತು ಅವರ ಸಹೋದರರ ನಡುವೆ ಒಟ್ಟು ಕುಟುಂಬದ ಆಸ್ತಿಯಲ್ಲಿ ಅವರ ತಂದೆ ಭೀಮಪ್ಪ ಮರಣಾ ನಂತರ ಪಾಲುವಾಟ್ನಿಯಾಗಿದ್ದು ನಿರ್ದಿಷ್ಟ ದಿನಾಂಕ ತಿಳಿದಿರುವುದಿಲ್ಲ. ಪಾಲುವಾಟ್ನಿಗೆ ಸಂಬಂಧಿಸಿದ ದಾಖಾಲತಿಗಳನ್ನು ನಾನು ವೈಯಕ್ತಿಕವಾಗಿ ನೋಡಿ ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿ ನಂ.2 ಮತ್ತು ಅವರ ಸಹೋದರರ ನಡುವೆ ಒಟ್ಟು ಕುಟುಂಬದ ಆಸ್ತಿಯಲ್ಲಿ ಅವರ ತಂದೆ ಭೀಮಪ್ಪ ಮರಣಾ ನಂತರ ಪಾಲುವಾಟ್ನಿಯಾಗಿರುತ್ತದೆ ಎಂದು 2 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆಂದರೆ ಸರಿ ಅಲ್ಲ. ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ 3 ನೇ ಖಂಡಿಕೆಯಲ್ಲಿ ವಾದಿ ನಂ.1 ರವರು ಆತನ ಪತಿ ಅನಾರೋಗ್ಯ ಅವಸ್ಥೆಯಲ್ಲಿ ಇದ್ದು ಆತನ ಪಾಲಿನ ಜಮೀನನ್ನು ನೋಡಿಕೊಳ್ಳಲು ಆಗುವುದಿಲ್ಲ ಎಂದು ಹೊರಟುಹೋಗಿದ್ದು 2 ನೇ ಪ್ರತಿವಾದಿ ವಾದಿ ನಂ.1 ರವರ ಪತಿಯ ಯೋಗಕ್ಷೇಮ ಮತ್ತು ವೈದ್ಯಕೀಯ ಖರ್ಚು ವೆಚ್ಚ ನೋಡಿಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆಂದರೆ ಸರಿ ಅಲ್ಲ. ಈ ಎಲ್ಲ ವಿಚಾರಗಳನ್ನು ನನಗೆ ಪ್ರತಿವಾದಿ ನಂ.2 ರವರು ಹೇಳಿರುತ್ತಾರೆ ಎಂದರೆ ಸರಿ. ನನ್ನ ಸಾಕ್ಷಿಯ ಮುಖ್ಯ ವಿಚಾರಗಳು ಸುಳ್ಳಾಗಿದ್ದು ಪ್ರತಿವಾದಿ ನಂ.2 ರವರ ಮಾತು ಕೇಳಿಕೊಂಡು

ವಾದಿಯರ ಸ್ವಾದೀನ ಹಿಸ್ಸೆಯನ್ನು ಕೊಡಬಾರದು ಎಂಬ ಉದ್ದೇಶದಿಂದ  ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆಂದರೆ ಸರಿ ಅಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.